

ಜೊತೆ ಆಗಾಗ ಪ್ರವಾಸಕ್ಕೆ ಹೋಗುತ್ತಿದ್ದ ರಾಹುಲ್, ಅಲ್ಲಿರುವ ಹಳೆಯ ವಸ್ತುಗಳನ್ನು ಕುತೂಹಲದಿಂದ ವೀಕ್ಷಿಸುತ್ತಿದ್ದರು. ಅಲ್ಲದೆ ಅವರ ತಂದೆ ಪ್ರವಾಸಕ್ಕೆಂದು ಹೋದಾಗ ಅಲ್ಲಿಯ ಹಳೆಯ ಆಕರ್ಷಕ ವಸ್ತುಗಳನ್ನು ತಂದು ಕೊಡುತ್ತಿದ್ದರು. ಅದನ್ನ ಜತನದಿಂದ ಕಾಪಿಡುತ್ತಿದ್ದ ರಾಹುಲ್, ಇದನ್ನೇ ಹವ್ಯಾಸ ಮಾಡಿಕೊಂಡರು.

ಮನೆಯ ಯಾವ ಗೋಡೆ ಮೇಲೆ ನೋಡಿದರೂ ಬರೀ ಗಡಿಯಾರಗಳೇ ಕಾಣಿಸುತ್ತವೆ. ಗಡಿಯಾರದ ಬಗೆಗೆ ವಿಶೇಷ ಆಸಕ್ತಿ ಬೆಳೆಸಿಕೊಂಡಿರುವ ಅವರು, ಜರ್ಮನಿ, ಅಮೆರಿಕ, ಜಪಾನ್, ಫ್ರಾನ್ಸ್ ಹಾಗೂ ಇಂಗ್ಲೆಂಡಿನಿಂದ ಆಕರ್ಷಕ ಹಾಗೂ ಐತಿಹ್ಯ ಹೊಂದಿರುವ ಗಡಿಯಾರಗಳನ್ನು ಸಂಗ್ರಹಿಸಿಟ್ಟಿದ್ದಾರೆ. ಗುಸ್ತಾವ್ ಬೇಕರ್, ವಿಕ್ಟೋರಿಯನ್ ವಾಲ್‌ನಟ್, ಹಾರ್ಡ್ ಮಿಲ್ಲರ್ ಮಿನಿಚರ್ ಕ್ಲಾಕ್, ಜರ್ಮನಿ ಆ್ಯನಿವರ್ಸರಿ ಕ್ಲಾಕ್, ಗಾಂಧೀಜಿ ಕಾಲದ ಪಾಕೆಟ್ ವಾಚ್, ಡಚ್ ಕ್ಲಾಕ್ ಹೀಗೆ ವಿವಿಧ ರೀತಿಯ 600ಕ್ಕೂ ಹೆಚ್ಚು ಗಡಿಯಾರಗಳು ಇವರ ಮನೆಯಲ್ಲಿ ಕಾಣಸಿಗುತ್ತವೆ. ಆದ್ರೆ ಬಹುತೇಕ ಗಡಿಯಾರಗಳು ಜರ್ಮನಿಯಿಂದ ತರಿಸಿದ್ದು ಎನ್ನುತ್ತಾರೆ ರಾಹುಲ್.

ಏಕಾಂತ ಸೃಷ್ಟಿಸುವ ಆಸ್ಲರ್ ಲ್ಯಾಂಪ್, ಕತ್ತಲಿನಲ್ಲಿ ಪ್ರತಿಫಲಿಸಿ ತನ್ನತ್ತ ಸೆಳೆಯುತ್ತದೆ. ಇದರಂತೆ ಹತ್ತಾರು ಬ್ರಿಟಿಷ್ ಲ್ಯಾಂಪ್‌ಗಳು, ಅಂದು ಚರ್ಚ್‌ಗಳಲ್ಲಿ ಬಳಸುತ್ತಿದ್ದ ಕ್ಯಾಂಡಲ್ ಲ್ಯಾಂಪ್‌ಗಳು ಇವರ ಮನೆಯ ಗೋಡೆಯನ್ನು ಅಲಂಕರಿಸಿವೆ.

ಹಳೇ ಕಾಲದ ಮೋಟರ್ ಬೈಕ್‌ಗಳು, 'RRR' ಬಳಸಿರುವ ನಾಟನ್ (Northan) ಬೈಕ್, ಲ್ಯಾಂಬ್ರೆಟ್ಟಾ, ಇನೊಸೆಂಟಿ, ಲ್ಯಾಂಬಿ, ಪ್ರಿಯಾ ಸ್ಕೂಟರ್, ಬಜಾಜ್ ಸನ್ನಿ (1990 ಮಾಡೆಲ್), ಆಸ್ಟಿನ್ ಎ40, 1951 ಮಾಡೆಲ್ (ಮೇಡ್ ಇನ್ ಇಂಗ್ಲೆಂಡ್) ಹಾಗೂ ಬ್ರಿಟಿಷ್ ಪ್ಯಾನ್ ಡಾನ್ ಕಾರ್ ಹೀಗೆ 10ಕ್ಕೂ ಹೆಚ್ಚು ವಾಹನಗಳು ಇವರ ಬಳಿಯಿವೆ. ಇವುಗಳ ಜೊತೆಗೆ ಬೈಸಿಕಲ್, ಹಾಗೂ ಕಿಡ್ಸ್ ಕಾರನ್ನು ಇಲ್ಲಿ ನೋಡಬಹುದು. ಎಲ್ಲವೂ ಕಾರ್ಯನಿರ್ವಹಿಸುತ್ತವೆ ಅನ್ನುವುದೇ ವಿಶೇಷ. ಇಟಲಿಯಿಂದ ತರಿಸಿರುವ ವಾಹನಗಳನ್ನು ಆಗಾಗ ರಾಹುಲ್ ಹಾಗೂ ಇಬ್ಬರು ಮೆಕ್ಯಾನಿಕ್ ರಿಪೇರಿ ಮಾಡುತ್ತಾರೆ.

**ಗಮನಸೆಳೆಯುವ ಮ್ಯೂಸಿಕ್ ಬಾಕ್ಸ್:** ಪುಟ್ಟ ಡಬ್ಬಾ ತೆರೆದರೆ ಸಿಲಿಂಡರ್, ಅದರ ಸುತ್ತ ಪಿನ್‌ಗಳು, ಪಕ್ಕದಲ್ಲಿರೊ ಕೀಲಿ ತಿರುಗಿಸಿದರೆ ಒಂದರ ನಂತರ ಒಂದಂತೆ ಒಟ್ಟು ಏಳು ರೀತಿಯ ಮ್ಯೂಸಿಕ್ ಕೇಳಿಸುತ್ತೆ. ಇದು ಮ್ಯಾನುವಲ್ ಆಗಿರುವುದರಿಂದ ಈಗಲೂ ಕಾರ್ಯನಿರ್ವಹಿಸುತ್ತದೆ. ಯಾವುದೇ ಬ್ಯಾಟರಿ ಅಥವಾ ಶೆಲ್ ಅವಶ್ಯಕತೆ ಇಲ್ಲ. ಈ ರೀತಿಯ ಎರಡು ಸಿಲಿಂಡರ್ ಬಾಕ್ಸ್ ಇವರ ಬಳಿಯಿದೆ. ಇದು ಬ್ರಿಟನ್ ರಾಣಿ ವಿಕ್ಟೋರಿಯಾ ತಮ್ಮ ಮೊಮ್ಮಕ್ಕಳಿಗಾಗಿ ಮಾಡಿಸಿದ್ದರು ಎನ್ನುತ್ತಾರೆ ರಾಹುಲ್.



ರಾಹುಲ್ ರೇಣಕೆ ಅವರು ತಮ್ಮ ಮನೆಯ ಟೆರೇಸ್ ಮೇಲೆ ಸಂಗ್ರಹಿಸಿರುವ ಆ್ಯಂಟಿಕ್ ಪೀಸ್‌ಗಳು ಜೊತೆ

**ಆಕರ್ಷಣೀಯ ಗ್ರಾಮಾಫೋನ್:** ಹಳೇ ಕಾಲದ ಸಿನಿಮಾಗಳಲ್ಲಿ ಕಾಣುತ್ತಿದ್ದ ಗ್ರಾಮಾಫೋನ್ ಇವರ ಸಂಗ್ರಹದ ಪ್ರಮುಖ ಆಕರ್ಷಣೆ. ಹೂವಿನಂತ ಆಕಾರ ಹೊಂದಿರುವ ಗ್ರಾಮಾಫೋನ್‌ನಿಂದ ಈಗಲೂ ಹೈ ವ್ಯಾಲ್ಯೂಮ್‌ನಲ್ಲಿ ಹಿಂದಿ ಚಿತ್ರಗೀತೆಗಳು ಕೇಳಿಸುತ್ತವೆ. ನೂರಾರು ವರ್ಷ ಹಳೆಯದಾಗಿರುವ ಗ್ರಾಮಾಫೋನ್‌ನ ಮೇಲೆ ಆಕರ್ಷಕ ಚಿತ್ರಗಳನ್ನು ಕಾಣಬಹುದು. ಈಗಲೂ ಅವುಗಳ ಬಣ್ಣ ಮಾಸಿಲ್ಲ.

**ಡಾನ್ಸಿಂಗ್ ಡಾಲ್:** ಈಚೆಗೆ ಜಪಾನಿಂದ ತರಿಸಿರುವ ಡಾನ್ಸಿಂಗ್ ಡಾಲ್, ಸಂಗೀತದೊಂದಿಗೆ 365 ಡಿಗ್ರಿಯಲ್ಲಿ ತಿರುಗುತ್ತದೆ. ಜರ್ಮನಿ, ಸ್ವಿಜರ್‌ಲೆಂಡ್‌ನಿಂದ ತರಿಸಿರುವ ಸಿಂಗಿಂಗ್ ಬರ್ಡ್ಸ್‌ಗಳು ಇಂಪಾಗಿ ಕೂಗಿ ನೋಡುಗರನ್ನು ಸೆಳೆಯುತ್ತವೆ.

**3ಡಿ ಪೇಂಟಿಂಗ್:** ಸುಮಾರು 70 ವರ್ಷ ಹಳೆಯದಾದ ಹಳ್ಳಿಯ ಸೊಬಗನ್ನು ಸೆರೆಹಿಡಿದಿರುವ ಚಕ್ಕಡಿ ಬಂಡಿಯ 3ಡಿ ಪೇಂಟಿಂಗ್, ನಾವು ಯಾವುದೇ ದಿಕ್ಕಿನಲ್ಲಿ ನಿಂತು ನೋಡಿದರೂ ಚಿತ್ರದಲ್ಲಿನ ವ್ಯಕ್ತಿ ಮತ್ತು ಎತ್ತುಗಳು ನಮ್ಮನ್ನೇ ನೋಡಿದಂತೆ ಭಾಸವಾಗುತ್ತದೆ.

ಘಮನ್ನುವ ಹತ್ತಾರು ವಿದೇಶಿ ಪರ್ಫ್ಯೂಮ್‌ಗಳು, ಬ್ರಿಟಿಷರ ಡಿಶ್‌ಗಳು, ಲ್ಯಾಂಪ್‌ಗಳು, ಹಳೆಯ ಕಾಲದ ತೊಟ್ಟಿಲು, ಸೈಕಲ್‌ಗಳು ಸಹ ಇವರ ಬಳಿಯಿವೆ.

ರಾಹುಲ್ ತಂದೆ ಮುಂಬೈನವರು. ಆದರೆ ರಾಹುಲ್ ಹುಟ್ಟಿ ಬೆಳೆದದ್ದು, ಶಿಕ್ಷಣ ಪಡೆದಿದ್ದು ಹುಬ್ಬಳ್ಳಿಯಲ್ಲಿ. ಕಾಲೇಜು ದಿನಗಳಲ್ಲಿಯೇ ಪಾರ್ಟ್ ಟೈಂ ಕೆಲಸ ಮಾಡುತ್ತಿದ್ದ ಅವರು ಅದರಲ್ಲಿಯ ಹಣದಿಂದಲೇ ಹಳೆಯ ವಸ್ತುಗಳನ್ನು ಖರೀದಿಸುತ್ತಿದ್ದರು. ಇಷ್ಟೆಲ್ಲಾ ವಸ್ತುಗಳನ್ನು ರಾಹುಲ್ ಅವರು ತಮ್ಮ ಮನೆಯ ಟೆರೇಸ್ ಮೇಲೆ, ಹಾಲ್ ಹಾಗೂ ಬೆಡ್ ರೂಂ ಗಳಲ್ಲಿ ಸಂಗ್ರಹಿಸಿದ್ದಾರೆ. ಈ ಎಲ್ಲಾ ವಸ್ತುಗಳ ಒಟ್ಟು ಮೌಲ್ಯ ಕೋಟಿಗೆ ಹತ್ತಿರವಿದೆಯಂತೆ!

**ವ್ಯಾಟ್ಸ್‌ಆ್ಯಪ್ ಗ್ರೂಪ್:** ದೇಶದ ವಿವಿಧ ರಾಜ್ಯದ ಹಳೇ ವಸ್ತು ಸಂಗ್ರಹಿಸುವವರು ಹಾಗೂ ಮಾರಾಟಗಾರರನ್ನೊಳಗೊಂಡ 'ಆಲ್ ಇಂಡಿಯಾ ಆ್ಯಂಟಿಕ್ ಪೀಸಸ್ ಬಯ್ಯರ್ ಆ್ಯಂಡ್ ಸೇಲರ್ಸ್' ಎಂಬ ವ್ಯಾಟ್ಸ್ ಆ್ಯಪ್ ಗ್ರುಪ್ ಮಾಡಿಕೊಳ್ಳಲಾಗಿದೆ. ಇದರಲ್ಲಿ 300ಕ್ಕೂ ಅಧಿಕ ಸದಸ್ಯರಿದ್ದಾರೆ. ಮಾರಾಟಗಾರರು ತಮ್ಮ ಬಳಿ ಇರುವ ವಿಂಟೇಜ್ ಬೈಕ್, ಕಾರ್, ಬ್ರಿಟಿಷರ ವಸ್ತುಗಳು ಹಾಗೂ ಆಕರ್ಷಕ ಹಳೆ ವಸ್ತುಗಳ ಫೋಟೊ ಹಾಗೂ ಬೆಲೆ ಹಾಕುತ್ತಾರೆ. ಆಸಕ್ತರು ಅದನ್ನು ಖರೀದಿಸುತ್ತೇವೆ ಎನ್ನುತ್ತಾರೆ ರಾಹುಲ್.

ಕೊರಿಯರ್ ಮೂಲಕವೂ ವಸ್ತುಗಳನ್ನು ಪಡೆದುಕೊಳ್ಳಬಹುದು. ಆದರೆ ಅನೇಕ ಬಾರಿ ವಸ್ತುಗಳ ಮನೆ ತಲುಪುವ ಮುನ್ನವೇ ತುಂಡಾಗುತ್ತವೆ. ಅವುಗಳನ್ನು ಮತ್ತೆ ರಿಪೇರಿ ಮಾಡಬೇಕಾಗುತ್ತದೆ. ಹಾಗಾಗಿ ಸಾಧ್ಯ ಇದ್ದಲ್ಲಿ ಖುದ್ದಾಗಿ ಸ್ಥಳಗಳಿಗೆ ಭೇಟಿ ನೀಡಿ, ಜತನದಿಂದ ತರುತ್ತೇನೆ.

ಹೆಚ್ಚು ಬಾರಿ ಮುಂಬೈಗೆ ಹೋಗಿದ್ದೇನೆ. ರಾಜಸ್ಥಾನ, ಪುಣೆ, ಬೆಂಗಳೂರು, ಬೆಳಗಾವಿ ಹಾಗೂ ಗೋವಾ ಸೇರಿದಂತೆ ವಿವಿಧ ಸ್ಥಳಗಳಿಗೆ ಹೋಗಿದ್ದೇನೆ. ಗಡಿಯಾರಗಳ ಬಗ್ಗೆ ಜರ್ಮನಿಯಲ್ಲಿರೊ ಸಂಬಂಧಿ ಮಾಹಿತಿ ನೀಡುತ್ತಾರೆ. ಒಮ್ಮೊಮ್ಮೆ ಕೊರಿಯರ್ ಚಾರ್ಜ್ ₹15 ರಿಂದ ₹ 20 ಸಾವಿರವಾಗುತ್ತದೆ.

ಇದಕ್ಕೆಲ್ಲಾ ಹೆಚ್ಚು ಹಣ ಬೇಕಾಗುತ್ತದೆ. ಅಗತ್ಯ ಇದ್ದಲ್ಲಿ ಪತ್ನಿಯ ಒಡವೆಗಳನ್ನು ಒತ್ತೆ ಇಟ್ಟಿದ್ದೇನೆ. ಹುಬ್ಬಳ್ಳಿಯಲ್ಲೊಂದು ಮ್ಯೂಸಿಯಂ ಮಾಡಬೇಕು ಎನ್ನುವ ಆಸೆ ಇದೆಲ್ಲವನ್ನೂ ಸಹಿಸಿಕೊಳ್ಳುವಂತೆ ಮಾಡುತ್ತದೆ. ಮುಂದೆ ಕೀ ಕಲೆಕ್ಷನ್, ಕಾರ್ ಹಾಗೂ ಆಕರ್ಷಕ ವಸ್ತುಗಳ ಕಲೆಕ್ಷನ್ ಮಾಡಬೇಕು ಎನ್ನುವ ಆಸೆ ಇದೆ ಎನ್ನುತ್ತಾರೆ ರಾಹುಲ್. ■